



ಕಾರಂಜಿ ಮಾದರಿಯ ಕಲ್ಲಿನ ಮರಿಗೆ



ಆಕರ್ಷಕ ಕೆತ್ತನೆಯ ಕಲ್ಲಿನ ಬಾನಿ



ಗವಿಯೊಳಗಿಂದ ಗೋಲಬಾವಿ ಪ್ರವೇಶ

ಪಕ್ಕದಲ್ಲಿಯೇ ಕಲ್ಲಿನಿಂದ ತಯಾರಿಸಿದ ಕಾರಂಜಿ ರೂಪದ ಮರಿಗೆಯೊಂದಿದೆ.

ಗೋಲಬಾವಿಯನ್ನು ನೋಡಲು ಹೋಗಬೇಕಾದರೆ ಬದಿಯಲ್ಲಿರುವ ಗವಿಯ ಮೆಟ್ಟಿಲಿಳಿಯಬೇಕು. ಬಾವಿಯ ಸುತ್ತಲೂ ಮಾಳಿಗೆಯಿದ್ದು ಹಗಲು ಹೊತ್ತಿನಲ್ಲಿಯೂ ಟಾರ್ಚ್‌ಲೈಟ್ ಇಲ್ಲವೇ ನಿಮ್ಮ ಮೊಬೈಲ್ ಟಾರ್ಚ್ ಆನ್ ಮಾಡಿಕೊಂಡು ಮೆಟ್ಟಿಲು ಇಳಿದು ಸಾಗಬೇಕು. ನೆಲ ಮಾಳಿಗೆಯು ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿ ಅರ್ಧವರ್ತುಲಾಕಾರದ ಕಮಾನುಗಳಿಂದ ಕೂಡಿದ್ದು, ಗಾರೆ–ಕೆಂಪುಕಲ್ಲು ಬಳಸಿ ಕಟ್ಟಲಾಗಿದೆ. ಈಗಲೂ ಅದು ಗಟ್ಟಿಮುಟ್ಟಾಗಿದೆ. ರಣ ಬಿಸಿಲಿನಲ್ಲಿಯೂ ತಣ್ಣಗಿನ ಅನುಭವ ನೀಡುತ್ತದೆ. ನೆಲಮಾಳಿಗೆಯ ಮಧ್ಯದಲ್ಲಿ ಚೌಕಾಕಾರದಲ್ಲಿ ಬಾವಿಯಿದೆ. ಗೋಡೆಗಳ ಮೇಲೆ ವಿವಿಧ ಆಕೃತಿಗಳಿದ್ದು ಅವೆಲ್ಲ ಈಗ ಮಸುಕಾಗಿವೆ.

ಗವಿಯ ಮೆಟ್ಟಿಲಿಳಿದು ಬಾವಿಯ ಸುತ್ತಲಿನ ಕಮಾನುಗುಂಟ ಸಾಗಿದರೆ ಅಲ್ಲೊಂದು ಸುರಂಗ ಮಾರ್ಗ ನಿಮ್ಮನ್ನು ಮತ್ತೆ ಅಚ್ಚರಿಗೊಳಿಸುತ್ತದೆ. ಶತ್ರುಗಳ ದಾಳಿಗೆ ಸಿಕ್ಕಿದಾಗ ಇಲ್ಲಿಂದ ತಪ್ಪಿಸಿಕೊಂಡು ಹೋಗಲು ಇಲ್ಲಿ ಸುರಂಗ ಮಾರ್ಗ ಕೆತ್ತಲಾಗಿದೆ ಎನ್ನುತ್ತಾರೆ ಸ್ಥಳೀಯರು. ಆದರೆ ಯಾರೂ ಕೂಡ ಈ ಸುರಂಗ ಮಾರ್ಗ ಎಲ್ಲಿಗೆ ಹೋಗಿ ತಲುಪುತ್ತದೆ ಎಂದು ನೋಡುವ ಸಾಹಸ ಮಾಡಿದ್ದು ಗೊತ್ತಿಲ್ಲ.

ಸದ್ಯಕ್ಕೆ ಈ ಗೋಲಬಾವಿ ನಿರ್ವಹಣೆಯ ಕೊರತೆಯಿಂದಾಗಿ ಬಾವಲಿಗಳ ಆವಾಸಸ್ಥಾನವಾಗಿದೆ. ನೀರು ಪಾಚಿಗಟ್ಟಿದೆ. ಸಂಜೆಯಾದರೆ ಈ ಪ್ರದೇಶ ಕುಡುಕರ ಅಡ್ಡೆಯಾಗುತ್ತಿದೆ ಎಂಬ ಮಾತೂ ಇದೆ. ಈ ಪಾರಂಪರಿಕ ತಾಣವನ್ನು ಇನ್ನಷ್ಟು ಸ್ವಚ್ಛ ಹಾಗೂ ಸುಂದರವಾಗಿ ಕಾಪಿಟ್ಟರೆ ಈ ಬಾವಿಯ ನೀರಿನ ಬಳಕೆಯೂ ಆದೀತು. ■